## ವಿಲ್ಲೋ ಮರ ಕ್ರಿಕೆಟ್‌ಗೆ ಬಲ

ಕ್ರಿಕೆಟ್ ಆಟದಲ್ಲಿ ಆಟಗಾರರು ಬಾಲನ್ನು ಬೌಂಡರಿಗೆ ಅಟ್ಟಿದಾಗ ಖುಷಿಪಡುವ ನಾವು, ಅಷ್ಟು ಜೋರಾಗಿ ಬಾಲನ್ನು ಹೊಡೆದರೂ ಹಾಳಾಗದ ಬ್ಯಾಟಿನ ಧೃಡತೆಯ ಬಗ್ಗೆ ತಿಳಿದಿದ್ದು ಇತ್ತೀಚೆಗೆ ಕಾಶ್ಮೀರ ಪ್ರವಾಸ ಹೋಗಿದ್ದಾಗ. ಶ್ರೀನಗರದಿಂದ ಪೆಹಲ್‌ಗಾಮಿಗೆ ಹೋಗುವ ರಸ್ತೆಯಲ್ಲಿ ದಾರಿಯುದ್ದಕ್ಕೂ ಮರದ ಪಟ್ಟಿಗಳನ್ನು ಈ ರೀತಿ ಕಲಾತ್ಮಕವಾಗಿ ಪೇರಿಸಿದ್ದರು. ಅಲ್ಲಿಯ ಜನರನ್ನು ವಿಚಾರಿಸಿದಾಗ ಭಾರತದ ಜನಪ್ರಿಯ ಕ್ರೀಡೆಯಾದ ಕ್ರಿಕೆಟ್ ಆಟದ ಬ್ಯಾಟುಗಳನ್ನು ಮಾಡಲು ಹೀಗೆ ಜೋಡಿಸಿಟ್ಟಿದ್ದಾರೆ ಎಂದರು.

ಕಾಶ್ಮೀರದಲ್ಲಿ ಹೆಚ್ಚಾಗಿ ಬೆಳೆಯುವ ವಿಲ್ಲೋ ಎಂಬ ಮರವನ್ನು ಬ್ಯಾಟಿನ ಆಕಾರಕ್ಕೆ ಕತ್ತರಿಸಿ ಈ ರೀತಿ ಒಣಗಿಸುತ್ತಾರೆ. ಈ ಮರದ ವಿಶೇಷತೆಯೆಂದರೆ ಇದನ್ನು ಹೀಗೆ ಬಿಸಿಲಿಗೆ ಇಟ್ಟಾಗ ವಾತಾವರಣದ ತೇವಾಂಶವನ್ನು ಮರವು ಹೀರಿಕೊಂಡು ಗಟ್ಟಿಯಾಗುತ್ತದೆ. ನಂತರ ಅದಕ್ಕೆ ಹಿಡಿಯನ್ನು ಜೋಡಿಸಿ ಬ್ಯಾಟಿಗೆ ಅಂತಿಮ ರೂಪವನ್ನು ಕೊಡುತ್ತಾರೆ. ಇಲ್ಲಿ ತಯಾರಾಗುವ ಬ್ಯಾಟುಗಳನ್ನು ಬಹಳಷ್ಟು ಕ್ರಿಕೆಟ್ ಆಟಗಾರರು ಉಪಯೋಗಿಸುತ್ತಾರೆ. ಕ್ರಿಕೆಟ್ ಆಟದಲ್ಲಿ 120–130 ಕಿ.ಮೀ ವೇಗವಾಗಿ ಎಸೆಯುವ ಬಾಲನ್ನು ಹೊಡೆದರೂ ಹಾಳಾಗದ ಸಾಮರ್ಥ್ಯ ವಿಲ್ಲೋ ಮರಕ್ಕೆ ಇರುವುದರಿಂದ ಇಲ್ಲಿನ ಜನರಿಗೆ ಬ್ಯಾಟುಗಳನ್ನು ತಯಾರಿಸುವ ಉದ್ಯೋಗವು ದೊಡ್ಡ ಉದ್ದಿಮೆಯಾಗಿ ಸಾವಿರಾರು ಜನರ ಜೀವನಕ್ಕೆ ಆಧಾರವಾಗಿದೆ.

**– ಸವಿತಾ ಸಚ್ಚಿದಾನಂದ, ಸಖರಾಯಪಟ್ಟಣ**





## ರಂಗಸ್ವಾಮಿಯ ರಂಗು ಸೇವೆ !

ಸೇವೆ ಮಾಡುವ ಮನಸ್ಸಿದ್ದವರಿಗೆ ತಮ್ಮ ವೈಯಕ್ತಿಕ ಜೀವನದ ದುಃಖ ದುಮ್ಮಾನಗಳು ಅಡ್ಡಿಯಾಗಲಾರವು ಎಂಬುದಕ್ಕೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಹೊಸ ಆನಂದೂರು ಪೇಂಟರ್ ರಂಗಸ್ವಾಮಿ ಉದಾಹರಣೆ. ಕಳೆದ 19 ವರ್ಷಗಳಿಂದ 3854 ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಕಪ್ಪು ಹಲಗೆಗಳಿಗೆ ಉಚಿತವಾಗಿ ಕಪ್ಪು ಬಣ್ಣ ತುಂಬಿರುವ ರಂಗಸ್ವಾಮಿ, ಶಾಲೆಗಳಲ್ಲಿ ಅವಕಾಶ ಸಿಕ್ಕಿದರೆ ಮಿಮಿಕ್ರಿಯನ್ನೂ ಮಾಡಿ ಮಕ್ಕಳನ್ನು ರಂಜಿಸುತ್ತಾರೆ. ವಾರದಲ್ಲಿ ಒಂದು ದಿನ ಈ ಪರಿ ಸೇವೆಗೈಯುತ್ತಿರುವ ರಂಗಸ್ವಾಮಿಯವರ ಸೈಕಲ್ ಸವಾರಿ ಹೀಗೆಯೇ ಸಾಗಲಿ.

**-ಮ.ಗು.ಬಸವಣ್ಣ, ನಂಜನಗೂಡು**

## ವಿಶಿಷ್ಟ ರುಬ್ಬುವ ಕಲ್ಲು

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿರುವ ಶ್ರೀಕ್ಷೇತ್ರ ಬನಶಂಕರಿ ದೇವಸ್ಥಾನದ ಆವರಣದಲ್ಲಿರುವ ವಿಶೇಷವಾದ ರುಬ್ಬುವ ಕಲ್ಲು. ಈ ಕಲ್ಲಿನ ಸಹಾಯದಿಂದ ಹೂರಣ, ಹುಣಸೆ ತೊಕ್ಕು, ಚಟ್ನಿ, ಮುಂತಾದವನ್ನು ತಯಾರಿಸುತ್ತಾರೆ. ಜಾತ್ರಾ ಮಹೋತ್ಸವಗಳಲ್ಲಿ ಲಕ್ಷಾಂತರ ಭಕ್ತರು ಸೇರುತ್ತಾರೆ. ಬಂದ ಜನರಿಗೆ ನಿತ್ಯ ದಾಸೋಹ ಇರುವ ಕಾರಣ ಈ ಕಲ್ಲಿನ ಸಹಾಯದಿಂದ ರುಬ್ಬಲಾಗುವುದು.

**- ಶಾಲ್ಮಲಾ ಚಳಗೇರಿ, ಕೊಪ್ಪಳ**

